ಓ.ಎಸ್. ನಂ.331/2020 ರಲ್ಲಿ
ಪಿ.ಡಬ್ಲ್ಯೂ-1(ಆರೀಫ್ ಖಾನ್)

ದಿನಾಂಕ 22-07-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ.ಎನ್.ಯು.ಹೆಚ್ ವಕೀಲರಿಂದಃ-

ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನಮ್ಮ ತಂದಗೆ ನಾವು 4 ಜನ ಮಕ್ಕಳು. ನಮ್ಮ ಕುಟುಂಬದ ವಂಶವೃಕ್ಷ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಜ್ಞಾಪಕ ಇಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಗೆ ಕ್ರಯಪತ್ರ ಆಗಿರುವ ವಿಚಾರ ನನಗೆ 2020 ರಲ್ಲಿ ಗೊತ್ತಾಯಿತು. ಹೇಗೆ ಗೊತ್ತಾಯಿತು ಎಂದರೆ ಕೆಐಡಿಬಿ ಇಂದ ನನ್ನ ತಂದೆಗೆ ನೋಟೀಸು ಬಂದಾಗ ಗೊತ್ತಾಯಿತು. ಸದರಿ ನೋಟೀಸಿನ ಪ್ರತಿಯನ್ನು ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ. ವಾದ ಪತ್ರಕ್ಕೆ ಸಹಿ ಹಾಕಿದ್ದೇನೆ. ನಿಮ್ಮ ಸಹಿ ತೋರಿಸಿ ಎಂದಾಗ ಸಾಕ್ಷಿ ತಿದ್ದುಪಡಿ ವಾದ ಪತ್ರದಲ್ಲಿ 1ನೇ ಪುಟದಲ್ಲಿ ಆರೀಫ್ ಎಂಬ ಸಹಿಯನ್ನು ತೋರಿಸಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಸಿ-1 ಎಂದು ಗುರುತಿಸಲಾಯಿತು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಹಾಕಿರುತ್ತೇನೆ, ಅದನ್ನು ಆರೀಫ್ ಖಾನ್ ಎಂದು ಹಾಕಿರುತ್ತೇನೆ. ನಿಸಿ-1 ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸಹಿಗಳಲ್ಲಿ ಯಾವುದು ನಿಮ್ಮ ಎಂದರೆ ಸಾಕ್ಷಿ ಎರಡು ನನ್ನದೇ ಎಂದು ನುಡಿಯುತ್ತಾರೆ. ನಿಸಿ-1 ಸಹಿಗೂ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಆರೀಫ್ ಖಾನ್ ಎಂಬ ಸಹಿಗಳಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಮೊದಲ ಪುಟದಲ್ಲಿ ಇರುವ ನನ್ನ ಸಹಿಯನ್ನು ನಿಸಿ-2 ಎಂದು ಗುರುತಿಸಿರುತ್ತೇನೆ.

ಭೂಸ್ವಾಧೀನ ಆದದ್ದು 2020 ರಲ್ಲಿ. ಈ ದಾವೆಯಲ್ಲಿ ಜಾಗ ನಮ್ಮದ್ದು ಎಂದು ಕೇಳಿದ್ದೇವೆ. ಜಮೀನನ್ನು ನಮ್ಮ ತಂದೆ ನೋಡಿಕೊಳ್ಳುತ್ತಿದ್ದರು. ಆನಂತರ ನಾವು ಅಣ್ಣ ತಮ್ಮಂದಿರು ಎಲ್ಲರೂ ನೋಡಿಕೊಳ್ಳುತ್ತಿದ್ದೇವೆ. ನಾವು ಏನೂ ಬೆಳೆ ಬೆಳೆಯುತ್ತಿಲ್ಲ. ದಾವಾ ಸ್ವತ್ತು ಭೂಸ್ವಾಧೀನಗೊಂಡಿದ್ದರಿಂದ ನೀವು ಮಾಲೀಕರೆಂದು ಘೋಷಿಸಲು ಬರುವುದಿಲ್ಲ ಎಂದರೆ ಸಾಕ್ಷಿ ಮೊದಲಿನಿಂದಲೂ ನಾವೇ ಸ್ವಾಧೀನದಲ್ಲಿದ್ದೆವೆಂದು ನುಡಿಯುತ್ತಾರೆ.

ಪಾಟೀ ಸವಾಲನ್ನು ಸಮಯದ ಅಭಾವದಿಂದ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.